# ಸುದ್ದಿ ಸಂಚಯ

## ತಮಿಳುನಾಡು ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್ ಉದ್ಘಾಟನೆ



ತಮಿಳುನಾಡು ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ಫಲಕದ ಅನಾವರಣ- ಎಡದಿಂದ, ಸ್ವಾಮಿ ಆತ್ಮಘನಾನಂದಜಿ, ಸ್ವಾಮಿ ಗೌತಮಾನಂದಜಿ, ಸ್ವಾಮಿ ಅಭಿರಾಮಾನಂದಜಿ, ಸ್ವಾಮಿ ರಘುನಾಥಾನಂದಜಿ ಮತ್ತು ಸ್ವಾಮಿ ಕಮಲಾತ್ಮಾನಂದಜಿ

**ರಾ**ಮಕೃಷ್ಣ ಮಠ ಮತ್ತು ಮಿಷನ್ನಿನ ಮಾರ್ಗದರ್ಶನದಲ್ಲಿ, ರಾಮಕೃಷ್ಣ ಮಹಾಸಂಘದ ಆಡಳಿತಕ್ಕೆ ಒಳಪಡದ, ಆದರೆ ರಾಮಕೃಷ್ಣ–ವಿವೇಕಾನಂದ ಭಾವಧಾರೆಯ ಪ್ರಭಾವದಿಂದ ಕಾರ್ಯವೆಸಗುತ್ತಿರುವ ಆಶ್ರಮಗಳು ಮತ್ತಿತರ ಸಂಘಸಂಸ್ಥೆಗಳ ಒಕ್ಕೂಟವೊಂದು ಅನೇಕ ವರ್ಷಗಳಿಂದ ಭಾರತದ ಹಲವಾರು ರಾಜ್ಯಗಳಲ್ಲಿ ಸಂಘಟಿತವಾಗಿದೆ. ಇದನ್ನು **'ರಾಮಕೃಷ್ಣ ವಿವೇಕಾನಂದ ಭಾವಪ್ರಚಾರ ಪರಿಷತ್'** ಎಂದು ಕರೆಯುತ್ತಾರೆ. ಈ ಒಕ್ಕೂಟದ ತಮಿಳುನಾಡಿನ ಶಾಖೆಯು ೭.೧೧.೨೦೦೯ ರಂದು ಚೆನ್ನೈನ ರಾಮಕೃಷ್ಣ ಮಠದಲ್ಲಿ ಉದ್ಘಾಟನೆಗೊಂಡಿತು. ಈ ಮಠದ ಅಧ್ಯಕ್ಷರು ಹಾಗೂ ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳಲ್ಲಿ ಒಬ್ಬರೂ ಆದ ಸ್ವಾಮಿ ಗೌತಮಾನಂದಜಿ ಅವರು ಇದರ ಅಧ್ಯಕ್ಷರಾಗಿ ನಿಯುಕ್ತಿಗೊಂಡಿದ್ದಾರೆ. ಹಾಗೆಯೇ, ಮದುರೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಕಮಲಾತ್ಮಾನಂದಜಿ ಮತ್ತು ಚೆನ್ನೈನ ರಾಮಕೃಷ್ಣ ಮಿಷನ್ ವಿದ್ಯಾಪೀಠದ ಮುಖ್ಯಸ್ಥರಾದ ಸ್ವಾಮಿ ಆತ್ಮಘನಾನಂದಜಿ ಅವರು ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಚೆಂಗಮ್ ನಗರದ ಶ್ರೀರಾಮಕೃಷ್ಣ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಪಾಂಡುರಂಗನ್ ಅವರು ಇದರ ಕನ್ವೀನರ್ ಅಗಿರುತ್ತಾರೆ.

ಈ ಉದ್ಘಾಟನಾ ಸಮಾರಂಭದಲ್ಲಿ ಸ್ವಾಗತ ಭಾಷಣವನ್ನು ಮಾಡಿದ ಸ್ವಾಮಿ ಆತ್ಮಘನಾನಂದಜಿ ಅವರು, "ತಮಿಳುನಾಡಿನಲ್ಲಿ ಹಲವಾರು ಸಂಘಸಂಸ್ಥೆಗಳು ಅನೇಕ ವರ್ಷಗಳಿಂದ ದಿವ್ಯತ್ರಯರ ಹೆಸರಿನಲ್ಲಿ ಆಧ್ಯಾತ್ಮಿಕ ಮತ್ತು ಸಾಮಾಜಿಕ ಸೇವಾಕಾರ್ಯಗಳನ್ನು ನಡೆಸುತ್ತಿವೆ. ಈಗ, **'ತಮಿಳುನಾಡು ರಾಮಕೃಷ್ಣ ವಿವೇಕಾನಂದ ಭಾವಪ್ರಚಾರ ಪರಿಷತ್'** ಎಂಬ ಸಂಘಟನೆಯನ್ನು ಈ ಎಲ್ಲ ಕೇಂದ್ರಗಳನ್ನು ಒಗ್ಗೂಡಿಸಲು ರಚಿಸಲಾಗಿದೆ" ಎಂದರು.

ಅಖಿಲಭಾರತ ಮಟ್ಟದಲ್ಲಿ ರಾಮಕೃಷ್ಣ–ವಿವೇಕಾನಂದ ಭಾವ ಪರಿಷತ್ತಿನ ವ್ಯವಸ್ಥಾಪಕರಾದ ಸ್ವಾಮಿ ಶಿವಮಯಾನಂದಜಿ ಅವರು ಇದನ್ನು ಉದ್ಘಾಟಿಸಲು ಆಗಮಿಸಬೇಕಾಗಿತ್ತು. ಆದರೆ ಅನಿವಾರ್ಯ ಕಾರಣಗಳಿಂದಾಗಿ, ಅವರ ಅನುಪಸ್ಥಿತಿಯಲ್ಲಿ, ರಾಮಕೃಷ್ಣ ಮಹಾಸಂಘದ ಮುಖ್ಯಕೇಂದ್ರವಾದ ಬೇಲೂರುಮಠದಿಂದ ನಿಯೋಜಿಸಲ್ಪಟ್ಟ, ಸ್ವಾಮಿ ರಘುನಾಥಾನಂದಜಿ ಅವರು ದೀಪವನ್ನು ಪ್ರಜ್ವಲಿಸಿ. ಭಾವಪ್ರಚಾರ ಪರಿಷತ್ತಿನ ಫಲಕವನ್ನು ಅನಾವರಣ ಮಾಡಿ, ಈ ಒಕ್ಕೂಟವನ್ನು ಉದ್ಘಾಟಿಸಿದರು.

ಅನಂತರ, ಪರಿಷತ್ತಿಗೆ ಸದ್ಯ ಸೇರ್ಪಡೆಗೊಂಡಿರುವ ೧೨ ಕೇಂದ್ರಗಳಿಗೆ ಸೇರಿದ, ಇಬ್ಬಿಬ್ಬರು ಸದಸ್ಯರನ್ನು, ಚೆನ್ನೈ ಮಠದ ಮ್ಯಾನೇಜರ್ ಆದ ಸ್ವಾಮಿ ಅಭಿರಾಮಾನಂದಜಿ ಅವರು ಸಭೆಗೆ ಪರಿಚಯ ಮಾಡಿಕೊಟ್ಟರು.

ಸ್ವಾಮಿ ರಘುನಾಥಾನಂದಜಿ ಅವರು ಮಾತನಾಡುತ್ತ, ೧೯೮೦ ರಲ್ಲಿ ಬೇಲೂರು ಮಠದಲ್ಲಿ ನಡೆದ ರಾಮಕೃಷ್ಣ ಮಹಾಸಂಘದ ಮಹಾಧಿವೇಶನದಲ್ಲಿ (convention), ಅಂದಿನ ಪರಮಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ವೀರೇಶ್ವರಾನಂದಜಿ ಮಹಾರಾಜ್ ಅವರು ನುಡಿದದ್ದನ್ನು ಜ್ಞಾಪಿಸಿಕೊಂಡರು: "ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಮತ್ತು ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ

ಭಕ್ತರು ಹಲವಾರು ಕೇಂದ್ರಗಳನ್ನು ನಡೆಸುತ್ತಿದ್ದಾರೆ. ಈ ಕೇಂದ್ರಗಳು ಆಧ್ಯಾತ್ಮಿಕ ಮತ್ತು ಸಮಾಜಕಲ್ಯಾಣ ಚಟುವಟಿಕೆಗಳನ್ನು ಬಹಳ ಚೆನ್ನಾಗಿ ನಡೆಸುತ್ತಿವೆ. ಆದರೆ ಅವುಗಳಿಗೂ, ಬೇಲೂರುಮಠಕ್ಕೂ ನಡುವೆ ನಿಕಟ ಬಾಂಧವ್ಯ ಮೂಡಿಬಂದಿಲ್ಲ. ಈ ಸಂಘಟನೆಗಳನ್ನು ಬೇಲೂರುಮಠದ ಸಂಪರ್ಕಕ್ಕೆ ತರಬೇಕು ಮತ್ತು ಅದಕ್ಕಾಗಿ ಪ್ರಯತ್ನಗಳು ನಡೆಯಬೇಕು."

ಸ್ವಾಮಿ ರಘುನಾಥಾನಂದಜಿ ಅವರು ಮುಂದುವರಿದು, "ಪೂಜ್ಯ ಸ್ವಾಮೀಜಿಯವರ ಇಚ್ಛೆಯ ಆಧಾರದ ಮೇರೆಗೆ ಬೇಲೂರುಮಠವನ್ನು ಪ್ರಧಾನಕೇಂದ್ರವಾಗಿ ಇಟ್ಟುಕೊಂಡು, **'ರಾಮಕೃಷ್ಣ ವಿವೇಕಾನಂದ ಭಾವಪ್ರಚಾರ ಪರಿಷತ್'**, ೧೯೮೨ ರಲ್ಲಿ ಉದ್ಘಾಟನೆಗೊಂಡಿತು. ಈ ಸಂಘಟನೆಗೆ ಸದಸ್ಯರಾಗಲು ಹತ್ತು ಅಂಶಗಳ ಮಾರ್ಗದರ್ಶಕ ಸೂತ್ರಗಳನ್ನು ಬೇಲೂರು ಮಠವು ಪ್ರಕಟಿಸಿದೆ.. ಮೇಲಿನ ಸೂತ್ರಗಳಿಗೆ ಅಧೀನವಾಗಿ ನಡೆದುಕೊಳ್ಳಲು ಸಮ್ಮತಿಸುವ ಕೇಂದ್ರಗಳು ಮಾತ್ರವೇ ಇದರ ಸದಸ್ಯರಾಗಬಹುದು. ಭಾವಪ್ರಚಾರ ಪರಿಷತ್ತಿನ ಶಾಖೆಗಳು ಈಗಾಗಲೇ, ಭಾರತದ ಹಲವು ರಾಜ್ಯಗಳಲ್ಲಿ ಯಶಸ್ವಿಯಾಗಿ ನಡೆಯುತ್ತಿವೆ. ಅದರಂತೆಯೇ ತಮಿಳುನಾಡಿನಲ್ಲಿ ಕೂಡ ಇದು ಚೆನ್ನಾಗಿ ನಡೆಯುವುದರಲ್ಲಿ ಸಂದೇಹವಿಲ್ಲ" ಎಂದು ನುಡಿದರು.

ತಮ್ಮ ಭಾಷಣದಲ್ಲಿ ಸ್ವಾಮಿ ಗೌತಮಾನಂದಜಿ ಅವರು, "ದಿವ್ಯತ್ರಯರ ಸಂದೇಶಗಳಲ್ಲಿ ದಿವ್ಯಶಕ್ತಿ ಮತ್ತು ಅಪ್ರತಿಮ ಬಲವಿದೆ. ಅವರ ಚಿಂತನೆಗಳನ್ನು ತಮಿಳುನಾಡಿನಾದ್ಯಂತ ಕೊಂಡೊಯ್ಯುವ ಗುರುತರ ಭಾರ ನಮ್ಮ ಮೇಲೆ ಇದೆ. ಈ ಪರಿಷತ್ತಿನ ಮೂಲಕ, ನಾವೆಲ್ಲರೂ ದೃಢಸಂಕಲ್ಪದಿಂದ ಮೇಲಿನ ಗುರಿಯನ್ನು ತಲುಪಲು ಕೆಲಸಮಾಡೋಣ. ಸಮರ್ಪಣೆ ಮತ್ತು ಸೇವಾ ಮನೋಭಾವಗಳುಳ್ಳ ಭಕ್ತರ ಅವಶ್ಯಕತೆ ಇದೆ. ರಾಮಕೃಷ್ಣ ವಿವೇಕಾನಂದ ಭಾವ ಪ್ರಚಾರ ಪರಿಷತ್ತು, ಅಂಥ ಗೃಹಸ್ಥರು ಮತ್ತು ಸಂನ್ಯಾಸಿ ಸದಸ್ಯರು ಒಟ್ಟಾಗಿ ಸೇವೆಗೈಯಲು ರಚಿತವಾದಂಥ ಸಂಘಟನೆಯಾಗಿದೆ" ಎಂದು ನುಡಿದರು. ಸ್ವಾಮಿ ಕಮಲಾತ್ಮಾನಂದಜಿ ಅವರು ವಂದನಾರ್ಪಣೆ ಮಾಡಿದರು.

## 'ಶಾರದಾ ಜ್ಞಾನಸುಧಾ ರಸಪ್ರಶ್ನೆ' ಬಹುಮಾನ ವಿತರಣೆ ಕಾರ್ಯಕ್ರಮ


ವಿದ್ಯಾರ್ಥಿಯೊಬ್ಬನಿಗೆ ಬಹುಮಾನ ವಿತರಿಸುತ್ತಿರುವ ಶ್ರೀ ಪ್ರಧಾನ ಗುರುದತ್

**'ಶ್ರೀಶಾರದಾ ಜ್ಞಾನಸುಧಾ ರಸಪ್ರಶ್ನೆ ಕಾರ್ಯಕ್ರಮ'** ಎನ್ನುವುದು ಕರ್ನಾಟಕ ರಾಜ್ಯದಾದ್ಯಂತ ಇರುವ ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ನಡೆಸುವ ರಸಪ್ರಶ್ನೆ ಕಾರ್ಯಕ್ರಮ. ಅದನ್ನು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಕಳೆದ ಐದು ವರ್ಷಗಳಿಂದ ನಡೆಸಿಕೊಂಡು ಬರುತ್ತಿದೆ.

೨೦೦೪ ರಿಂದ ಆರಂಭಗೊಂಡ ಈ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಇದುವರೆಗೂ ಸುಮಾರು ನಾಲ್ಕು ಲಕ್ಷ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಈ ವರ್ಷದ ವಿಶೇಷವೇನೆಂದರೆ, ಏಳನೆಯ ತರಗತಿಯಿಂದ ಹಿಡಿದು ಪದವಿ ಕಾಲೇಜುಗಳವರೆಗಿನ ವಿದ್ಯಾರ್ಥಿಗಳು ಮತ್ತು ಶಾಲಾಕಾಲೇಜು ಶಿಕ್ಷಕರಿಗೂ ಕೂಡ ಮೇಲಿನ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿದ್ದು. ಈ ವರ್ಷ ೫೦೧ ಶಾಲಾಕಾಲೇಜುಗಳ ಸುಮಾರು ೪೧,೦೦೦ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಇದರಲ್ಲಿ ಪಾಲ್ಗೊಂಡಿದ್ದರು.

ಈ ವರ್ಷ, ವಿವಿಧ ಭಾಗಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಉತ್ಕೃಷ್ಟತಾ ಬಹುಮಾನಗಳನ್ನು ನೀಡುವ ಕಾರ್ಯಕ್ರಮವು ದಿನಾಂಕ ೨೧. ೧೧. ೨೦೦೯ ರಂದು ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ಜರುಗಿತು. ಕುವೆಂಪು ಭಾಷಾಭಾರತಿ, ಬೆಂಗಳೂರು – ಇದರ ಅಧ್ಯಕ್ಷರಾಗಿರುವ ಡಾ. ಪ್ರಧಾನ ಗುರುದತ್ ಇವರು ಮುಖ್ಯ ಅತಿಥಿಗಳಾಗಿ ಬಂದು, ಬಹುಮಾನ ವಿತರಣೆ ಮಾಡಿದರು. ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥರಾದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಅವರು ಅಧ್ಯಕ್ಷತೆ ವಹಿಸಿದ್ದರು. ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಅವರು ಎಲ್ಲರನ್ನೂ ಸ್ವಾಗತಿಸಿ, ಅತಿಥಿಗಳ ಮತ್ತು ಈ ಯೋಜನೆಯ ಪರಿಚಯವನ್ನು ಮಾಡಿಕೊಟ್ಟರು. ಸ್ವಾಮಿ ಪರಹಿತಾನಂದಜಿ ಅವರು ವಂದನಾರ್ಪಣೆ ಸಲ್ಲಿಸಿದರು.

'ವಿವೇಕಪ್ರಭ' ಪತ್ರಿಕೆಯ ಚಂದಾದಾರರ ಮಾಹಿತಿ ನಿರ್ವಹಣಾ ತಂತ್ರಾಂಶವನ್ನು ಬೆಂಗಳೂರಿನ ಸ್ವಯಂಸೇವಾ ಸಂಸ್ಥೆಯಾದ **'ಶ್ರೀಶಾರದಾ ರಿಸರ್ಚ್ ಲ್ಯಾಬ್ಸ್'** ಅವರು ಹೊಸದಾಗಿ ಮಾಡಿಕೊಟ್ಟಿದ್ದಾರೆ. ಇದರ ಸಂಸ್ಥಾಪಕರು ದಿವ್ಯತ್ರಯರ ಭಕ್ತರಾದ ಶ್ರೀ ಜಗನ್ನಾಥ ಅವರು. ಈ ಸಂದರ್ಭದಲ್ಲಿ ಈ ತಂತ್ರಾಂಶವನ್ನು ಬಿಡುಗಡೆ ಮಾಡಲಾಯಿತು ಮತ್ತು ಇದಕ್ಕೆ ಕಾರಣಕರ್ತರಾದ ಶ್ರೀ ರಮೇಶ್ ಬಾಬು ಮತ್ತು ಶ್ರೀ ಶರವಣನ್ ಅವರನ್ನು ಸನ್ಮಾನಿಸಲಾಯಿತು.